480 ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಹೀಗೆ ಬೇರೆ ಬೇರೆ ಇಲಾಖೆಗಳ ಮತಿಯಿಂದ ಬರತಕ್ಕ ಕಟ್ಟಡ ಗಳನ್ನು ಪರಿಶೀಲನೆ ಮಾಡಿ, ಸರ್ಕಾರ ನೇರವಾಗಿ ಹಣ ತೊಡಗಿಸುವುದಕ್ಕೆ ಕಷ್ಟವಾದರೂ, ಹುಡ್ಕೋ ಸ್ಕೀಮ್‌ನಿಂದ ಹಣ ಪಡೆಯುವುದಕ್ಕೆ ಪ್ರಯತ್ನ ನಡೆಸುತ್ತಿದೆ. ಸಾಲದ ರೂಪದಲ್ಲಿ ಹಣವನ್ನು ಪಡೆದು ನೇಕರರು ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಹಣವನ್ನು ಮೊಸಲಾಗಿ ಇಟ್ಟಿದ್ದೇವೆ ಎಂದು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಬೆಂಗಳೂರು ಮಹಾನಗರದಲ್ಲಿ ಮನೆಗಳ ಕೊರತೆ ತುಂಬಾ ಇದೆ. ಹಣದ ಮುಗ್ಗಟ್ಟು ಇರುವುದರಿಂದ ಸರ್ಕಾರ ಅವರ ಬೇಡಿಕೆಯನ್ನು ಪೂರ್ಣವಾಗಿ ಈಡೇರಿಸಲಿಕ್ಕೆ ಆಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ನನ್ನ ಮತ್ತೊಂದು ಪ್ರಶ್ನೆಗೆ ರಾಜಾಜಿನಗರದಲ್ಲಿರುವ ಖಾಲಿ ನಿವೇಶನ ತಾಂತ್ರಿಕವಾಗಿ ಮುಖ್ಯವಾಸ್ತುಶಿಲ್ಪಿಯವರ ಅಭಿಪ್ರಾಯದಲ್ಲಿ ಸರಿ ಇರುವುದಿಲ್ಲವೆಂದು ಹೇಳಿದ್ದೀರಿ, ವಾಸ್ತುಶಿಲ್ಪಿಯವರು ಏತಕ್ಕೆ ಸರಿಯಿಲ್ಲವೆಂದು ಹೇಳಿದ್ದಾರೆ ಅದರ ಬಗ್ಗೆ ವಿವರ ಕೊಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.— ಮಾನ್ಯ ಸದಸ್ಯರಿಗೆ ವಿವರ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು. — ಪ್ರಶ್ನೆ : **183 (637)** ಸದಸ್ಯರು ಗೈರುಹಾಜರಿ.

ವಿಷಯ : ಲಿಂಗಸೂಗೂರು ತಾಲ್ಲೂಕಿನ ಮಸ್ಕಿಯಿಂದ ಕವಿತಾಳ, ತೋಳದನ್ನಿಯಿಂದ ಪೋತನಾಳ ಮತ್ತು ದಣಗಿಯಿಂದ ಹಿರೇಕೋಟ್ನೆಕಾಳ್ ರಸ್ತೆಗಳ ದುರಸ್ತಿ ಕುರಿತು.

ಪ್ರಶ್ನೆ : 183 (637) ಶ್ರೀ ಬಸವರಾಜ್ ಪಾಟೀಲ್ ಅನ್ವಾರಿ (ಲಿಂಗಸೂಗೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಮಸ್ಕಿಯಿಂದ ಕವಿತಾಳ ರಸ್ತೆ, ತೋಳದನ್ನಿಯಿಂದ ಪೋತನಾಳ ರಸ್ತೆ ಹಾಗೂ ದಣಗಿ ಹಿರೇಕಟ್ನಕಲ್ ರಸ್ತೆಗಳ ದುರಸ್ತಿ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ರಸ್ತೆಗಳನ್ನು ಯಾವಾಗ ದುರಸ್ತಿಗೊಳಿಸಲಾಯಿತು. ಹಾಗೂ ಈ ರಸ್ತೆಗಳಿಗೆ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಖರ್ಚು ಮಾಡಲಾಗಿದೆ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ಮಾನ್ಯರು ರಸ್ತೆಗಳ ಪೈಕಿ ಮಸ್ಕಿಯಿಂದ ಕವಿತಾಳದವರೆಗೆ ಇರುವ ರಸ್ತೆಯು ಮಾತ್ರ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಇನ್ನುಳಿದ ಎರಡು ರಸ್ತೆಗಳು ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಇವೆ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯ ದುರಸ್ತಿ ಕಾರ್ಯವನ್ನು ಪ್ರತಿ ವರ್ಷದಲ್ಲೂ ಆ ಸಾಲಿನ ಹಣದ ಲಭ್ಯತೆಗನುಗುಣವಾಗಿ ಮಾಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಪ್ರತಿ ವರ್ಷವೂ ಮೇಲ್ಕಾಣಿಸಿದ ಮಸ್ಕಿ ಕವಿತಾಳ ರಸ್ತೆಗೆ ಖರ್ಚು ಮಾಡಿರುವ ಹಣದ ವಿವರ ಈ ರೀತಿ ಇದೆ.

ವರ್ಷ	ಖರ್ಚು ಮಾಡಿರುವ ಹಣ		ಒಟ್ಟು
	337 ಶೀರ್ಷಿಕೆ	537 ಶೀರ್ಷಿಕೆ	
	ರೂ.ಗಳಲ್ಲಿ		
1978-79	92,627-00	—	92,627-00
1979-80	53,090-00	—	53,090-00
1980-81	61,550-00	1,91,800-00	2,53,350-00
1981-82	52,400-00	32,450-00	84,850-00
1982-83	87,000-00	—	87,000-00
1983-84 (31-12-83ರವರೆಗೆ)	75,000-00	—	75,000-00
ಒಟ್ಟು	4,21,677-00	2,24,250-00	6,45,917-00

ಮಾನ್ಯ ಸದಸ್ಯರು ಹಾಜರಿರಲಿಲ್ಲ

ವಿಷಯ : ಚಿಕ್ಕೋಡಿ ತಾಲ್ಲೂಕಿನ ಗಡಿಭಾಗದ ರಸ್ತೆಗಳ ದುರಸ್ತಿ ಬಗ್ಗೆ

ಪ್ರಶ್ನೆ : 184 (577) ಶ್ರೀ ಎ ಎ. ನಿಂಬಾಳ್‌ಕರ್ (ಸದಲಗ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಚಿಕ್ಕೋಡಿ ತಾಲ್ಲೂಕಿನ ಗಡಿಭಾಗದ ರಸ್ತೆಗಳು ದಃಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಅ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ;

ಇ) ಗಡಿ ಸುಧಾರಣಾ ರಸ್ತೆಗಳ ಕೆಲಸಗಳಿಗಾಗಿ ಖರ್ಚು ಮಾಡಲು ಆಯವ್ಯಯ ಪಟ್ಟಿಯಲ್ಲಿ ಹಣವನ್ನು ನಿಗದಿಗೊಳಿಸಲಾಗಿದೆಯೇ ;

ಈ) ಹಾಗಿದ್ದಲ್ಲಿ 83-84ನೇ ಸಾಲಿನಲ್ಲಿ ನಿಗದಿಪಡಿಸಲಾಗಿರುವ ಹಣ ಮತ್ತು ಅದರ ಪೈಕಿ ವೆಚ್ಚವಾದ ಹಣವೆಷ್ಟು ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು). —

ಅ) ಗಡಿಭಾಗದಲ್ಲಿನ ಕೆಲವು ರಸ್ತೆಗಳ ಪರಿಸ್ಥಿತಿ ಸಾಕಷ್ಟು ತೃಪ್ತಿಕರವಾಗಿಲ್ಲ.

ಆ) ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿ ಸುಧಾರಣಾ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.

ಇ) ಇಲ್ಲ.

ಈ) 1983-84ರ ಸಾಲಿನಲ್ಲಿ ನಾಲ್ಕು ರಸ್ತೆ ಕಾಮಗಾರಿಗಳಿಗೆ ಒಟ್ಟು ರೂ. 8-00 ಲಕ್ಷ ಅಂದಾಜಿಗೆ ರೂ. 1.84ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. ಈ ಕೆಲಸಗಳನ್ನು ಸಧ್ಯದಲ್ಲಿ ತೆಗೆದುಕೊಂಡು ಇದಕ್ಕೆ ನಿಗದಿಯಾದಂತ, ಅನುದಾನವನ್ನು ಖರ್ಚು ಮಾಡಲಾಗುವುದು.

Sri A A Nimbalkar — Whether the Hon. Minister is aware that the work of the PWD in this regard is unsatisfactory? If so, will the Hon. Minister take action to improve it?

ಶ್ರೀ ಹೆಚ್ ಡಿ ದೇವೇಗೌಡ. — ಇರತಕ್ಕಂಥ ಎಲ್ಲಾ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂದರೆ ನಮಗೆ ಹಣ ಬೇಕು. ಈಗ ನಾಲ್ಕು ಕೆಲಸಗಳನ್ನು ತೆಗೆದುಕೊಂಡಿದ್ದು ಇದರಲ್ಲಿ ಎರಡು ಕೆಲಸಗಳನ್ನು ಈಗಾಗಲೇ ಪ್ರಾರಂಭ ಮಾಡಲಾಗಿದೆ. ಇವುಗಳಿಗೆ 31-11-83ರಲ್ಲಿ ಮಂಜೂರಾತಿಯನ್ನು ಕೊಟ್ಟು 2-1-84 ರಿಂದ ಕೆಲಸ ಮಾಡಲಿಕ್ಕೆ ತೆಗೆದುಕೊಂಡಿದ್ದೇವೆ. ಅವುಗಳ ಹೆಸರುಗಳನ್ನು ಬೇಕಾದರೆ ಓದುತ್ತೇನೆ. ನೇತ್ರಕತ್ತಿಯಿಂದ ಹಿರಡಕಲ್ ಗಡಿವರೆಗೆ ಏಳು ಲಕ್ಷ ರೂಪಾಯಿಗಳ ಅಂದಾಜು ವೆಚ್ಚ ಇದ್ದು, ಇದಕ್ಕೆ 42 ಸಾವಿರ ರೂಪಾಯಿಗಳ ಗ್ರಾಂಟ್ ಕೊಟ್ಟಿದ್ದೇವೆ. ನಂದಲಗಾ ಪುತ್ತು ಮುಂಗಾರು ರಸ್ತೆ ಡಾಂಬರು ಹಾಕತಕ್ಕಂಥಾದ್ದಕ್ಕೆ 1.5 ಲಕ್ಷ ರೂಪಾಯಿಗಳ ಅಂದಾಜು ವೆಚ್ಚ, ಗ್ರಾಂಟ್ ಕೊಟ್ಟಿರುವುದು 36 ಸಾವಿರ ರೂಪಾಯಿಗಳು. ನಿಪ್ಪಾಣಿ-ಕೊಪ್ಪ ರಸ್ತೆ ಎರಡು ಲಕ್ಷ ರೂಪಾಯಿಗಳ ಅಂದಾಜು ವೆಚ್ಚ, ಗ್ರಾಂಟ್ ಕೊಟ್ಟಿರುವುದು ನಲ್ವತ್ತು ಸಾವಿರ ರೂಪಾಯಿಗಳು. ಮುಧೋಳ್-ನಿಪ್ಪಾಣಿ ರಸ್ತೆಗೆ ಡಾಂಬರು ಹಾಕಲಿಕ್ಕೆ, ಐದೂವರೆ ಲಕ್ಷ ರೂಪಾಯಿಗಳ ಅಂದಾಜು ಮಂಜೂರಾತಿ ಇದ್ದರೆ, 65 ಸಾವಿರ ರೂಪಾಯಿ ಗ್ರಾಂಟ್ ಕೊಡಲಾಗಿದೆ. ಎಂಡು ರಸ್ತೆಗಳ ಕೆಲಸ ಶುರುವಾಗಿ ಒಂದು ತಿಂಗಳು ಮಾತ್ರ ಆಗಿದೆ ಟೆಂಡರ್ ಫಾರ್ಮಾಲಿಟೀಸ್ ಮುಗಿದ ಕೂಡಲೇ ಬಾಕಿ ಕೆಲಸ ಶುರು ಮಾಡುತ್ತೇವೆ. ಮೇಲ್ಕಂಡ ನಾಲ್ಕು ರಸ್ತೆ ಕಾಮಗಾರಿಗಳನ್ನು ನಿಮ್ಮ ಕ್ಷೇತ್ರದಲ್ಲಿ ತೆಗೆದುಕೊಳ್ಳಲಾಗಿದೆ.

ವಿಷಯ : ಕಾರಂಜ ಯೋಜನೆಗೆ ವ್ಯಯ ಮಾಡಿರುವ ಬಗ್ಗೆ

ಪ್ರಶ್ನೆ : 185 (513) ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ) — ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) 1980-81, 1981-82, 1983-84ನೇ ಸಾಲಿನಲ್ಲಿ ಕಾರಂಜ ಯೋಜನೆಗೆ ವ್ಯಯ ಮಾಡಿರುವ ಮೊಬಲಗು ;

ಆ) ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು, ಈ ಸಾಲಿನಲ್ಲಿ ಕಡೆ ಪಕ್ಷ 5 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸುತ್ತೇವೆಂದು ಆಶ್ವಾಸನೆ ನೀಡಲಾಗಿದೆಯೇ ಮತ್ತು ಹಾಗಿದ್ದಲ್ಲಿ ಈ ಸಾಲಿನಲ್ಲಿ ಈ ಕೆಲಸಕ್ಕೆ ಒದಗಿಸಿದ ಹಣ ;

ಇ) ಅಣೆಕಟ್ಟು ವಿಭಾಗ ಮತ್ತು ನಾಲಾ ವಿಭಾಗಗಳಲ್ಲಿ ಏಕಕಾಲಿಕ ಕಾರ್ಯಗಳು ಜರುಗುತ್ತಿವೆಯೇ? ಹಾಗಿದ್ದಲ್ಲಿ ಇದರ ವಿವರಗಳನ್ನು ನಿರೂಪಿಸಿ ;

ಈ) ಹೆಚ್ಚಿಳ ಹಣವನ್ನು ಒದಗಿಸುವ ಯೋಜನೆ ಸರ್ಕಾರಕ್ಕೆ ಇದೆಯೆ ; ಈ ಜಿಲ್ಲೆ ನೀರಾವರಿ ಕ್ಷೇತ್ರದಲ್ಲಿ ಹಿಂದುಳಿದಿದ್ದುದರಿಂದ ವಿಶೇಷ ಗಮನ ಕೊಡಬೇಕೆಂದು ಸರ್ಕಾರದ ಗಮನದಲ್ಲಿದೆಯೇ ?

ಉತ್ತರ : ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

ಅ) 1980-81 .... 261.72 ಲಕ್ಷ ರೂಪಾಯಿಗಳು.
1981-82 .... 267 12 ಲಕ್ಷ ರೂಪಾಯಿಗಳು.
1982-83 .... 329.63 ಲಕ್ಷ ರೂಪಾಯಿಗಳು.
1983-84 .... 214.32 ಲಕ್ಷ ರೂಪಾಯಿಗಳು. (1983ರ ಡಿಸೆಂಬರ್ ಅಂತ್ಯದವರೆಗೆ).